ದಿನಾಂಕ:11-08-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ.ಪಿಡಿಟಿ ವಾದಿ ಪರ ವಕೀಲರಿಂದ :-

ದಾವಾ ಷಡಾಲ್ ಸ್ವತ್ತುಗಳಿಗೆ ಸಂಬಂದಿಸಿದಂತೆ ನನ್ನ ತಂದೆಯವರ ಹೆಸರಿನಲ್ಲಿ ಖಾತೆ ನಮೂದಾಗಿತ್ತು. ಸದರಿ ದಾವಾ ಷಡ್ಯೂಲ್ ಸ್ವತ್ತುಗಳಲ್ಲಿ ನನ್ನ ತಂದೆಯವರ ಹೆಸರು ಈಗ್ಗೆ 20 ವರ್ಷಗಳ ಹಿಂದಿಂನಿಂದಲೂ ಇದೆ. ನನ್ನ ತಂದೆಯವರ ಹೆಸರನಲ್ಲಿ ಇರುವ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಈಗ 15 ವರ್ಷಗಳಿಂದಲೂ ದಾವಾ ಆಸ್ತಿಗೆ ಸಂಬಂದಪಟ್ಟ ದಾಖಲಾತಿಗಳನ್ನು ನೋಡಿರುತ್ತೇನೆ. 2012 ನೇ ಇಸವಿಯಿಂದ ದಾವಾ ಆಸ್ತಿಗೆ ಸಂಬಂದಿಸಿದಂತೆ ದಾಖಲಾತಿಗಳು ವಾದಿಯ ಹೆಸರಿಗೆ ನಮೂದಗಿದೆ ಎಂದರೆ ಸರಿ. ಸದರಿ ದಾವಾ ಅಸ್ತಿಗಳು ವಂಶವೃಕ್ಷದ ಆಧಾರದ ಮೇಲೆ ನನ್ನ ತಂದೆಯವರ ಹೆಸರಿನಲ್ಲಿ ಇತ್ತು.

ನನ್ನ ತಾಂದೆಯವರು 2003 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ನನ್ನ ತಂದಯವರ ಮರಣದ ನಂತರ ನಮ್ಮ ಹೆಸರಿಗೆ ಕಂದಾಯ ದಾಖಲಾತಿಗಳನ್ನು ಬದಲಾವಣೆ ಮಾಡಿಸಿಕೊಳ್ಳಲು ಪ್ರಯತ್ನಿಸಿರುತ್ತೇವೆ. ನಾನು ಈ ದಾವೆಯಲ್ಲಿ ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ನಾನು ನನ್ನ ತಕರಾರಿನಲ್ಲಿ ನನ್ನ ತಂದೆಗೆ ಸೇರಿದ್ದ ಜಮೀನು ನಮಗೆ ಬರಬೇಕಿತ್ತು ಎಂದು ನಮೂದು ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯ ಈ ಬಗ್ಗೆ ನಾನು ತಿಳಿಸಿಲ್ಲ.

ನಾನು ದಾವಾ ಆಸ್ತಿಗಳು ನನ್ನ ತಂದೆಗೆ ಸೇರಿದ್ದು ನಮಗೆ ಬರಬೇಕೆಂದು ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ದಾವೆ ಸಲ್ಲಿಸಿಲ್ಲ ಸಾಕ್ಷಿಯು ಮುಂದುವರೆದು ಎಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ನಾನು ದಾವಾ ಆಸ್ತಿಗಳ ಸಂಬಂದಿಸಿದಂತೆ ವಿಭಾಗ ಕೋರಿ ಯಾವುದೇ ದಾವೆ ಸಲ್ಲಿಸಿಲ್ಲ. ವಾದಿ ಮತ್ತು ಅವರ ಸಹೋದರರು ಅಸಲು ದಾವೆ ಸಂಖ್ಯೆ:459/12 ಅನ್ನು ಸಲ್ಲಿಸಿ ಸದರಿ ದಾವೆಯಲ್ಲಿ ರಾಜೀಯಂತೆ ಡಿಕ್ರಿಯಾಗಿದ್ದು, ಸದರಿ ಡಿಕ್ರಿಯನ್ನು ಪ್ರಶ್ನಿಸಿ ಈ ಬಗ್ಗೆ ಯಾವುದೇ ದಾವೆ

ಸಲ್ಲಿಸಿಲ್ಲ. ನನ್ನ ತಂದೆಯವರಾಗಲಿ ವಾದಿಯ ತಂದೆಯವಾರಗಲಿ ಯಾವುದೇ ಮಾರಮ್ಮನ ದೇವಸ್ಥಾನಕ್ಕೆ ಸ್ವತ್ತುಗಳನ್ನು ದಾನ ಕೊಟ್ಟಿರುವುದಿಲ್ಲ.

ದಾವ ಆಸ್ತಿಗಳು ಮೂಲತಃ ವಾದಿಯ ತಂದೆ ಹಾಗೂ ಚಿಕ್ಕರಂಗಮ್ಮ ರವರ ಪತಿ ಕೆಂಪಯ್ಯನವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ ಅದು ನಮಗೂ ಬರಬೇಕಿತ್ತು ಎಂದು ನುಡಿಯುತ್ತಾರೆ. ಅದರಂತೆ ವಾದಿ ಹಾಗೂ ಚಿಕ್ಕರಂಗಮ್ಮ ರವರು ದಾವೆ ಸಲ್ಲಿಸಿ ಸದರಿ ದಾವೆಯ ರಾಜೀ ಡಿಕ್ರಿಯಂತೆ ವಾದಿಗೆ ದಾವಾ ಆಸ್ತಿಗಳು ಬಂದಿರುತ್ತವೆ ಎಂದರೆ ಸರಿ. ಅಂದಿನಿಂದ ದಾವಾ ಆಸ್ತಿಗಳು ವಾದಿಯ ಸ್ವಾದೀನ ಅನುಭವದಲ್ಲಿ ಇದೆ ಎಂದರೆ ಸರಿ. ವಾದಿಯು ನನ್ನ ಹಾಗೂ ನನ್ನ ಸಹೋದರ ಹಾಗೂ ಈ ದಾವೆಯ ಇತರ ಪ್ರತಿವಾದಿಗಳ ವಿರುದ್ದ ಕ್ರಿಮಿನಲ್ ಪರಕರಣ ದಾಖಲಿಸಿದರು ಎಂದರೆ ಸರಿ. ಸದರಿ ದಾವಾ ಆಸ್ತಿಲ್ಲಿ ಯಾವುದೇ ದೇವಸ್ಥಾನ ಇಲ್ಲ ಹಾಗೂ ಅದು ಸಾರ್ವಜನಿಕ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನಗೂ ಹಾಗೂ ಈ ದಾವೆಯ ವಾದಿ ನಡುವೆ ದ್ವೇಷ ಹಾಗೂ ಮತ್ಸರ ಇದೆ ಎಂದರೆ ಸರಿ. ವಾದಿಯು ಈ ದಾವೆಯನ್ನು ದಾಖಲು ಮಾಡುವ ಮುಂಚೆ ನಾನು ಮತ್ತು ಇತರರು ಅವರ ಸ್ವಾಧೀನ ಅನುಭವಕ್ಕೆ ಅಡ್ಡಿಯನ್ನುಂಟು ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಅಸ್ತಿಗಳಿಗೆ ಸಂಬಂದಿಸಿದಂತೆ ನನಗೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಮಧುಗಿರಿ.**